ಪ್ರಬಂಧ

# 10 ಗಂಟೆ ಬಸ್ ಅರ್ಥಾತ್ ಕಟ್ ಸರ್ವೀಸ್ ಬಸ್



**ನಿಂಗಪ್ಪ ಮುದೇನೂರು**

ಕಲೆ: ಸಂತೋಷ್ ಸಸಿಹಿತ್ಲು

ನನ್ನೂರು ಎಲ್ಲರ ಊರುಗಳಂತೆ ಒಂದು ವಿಚಿತ್ರ ಸಂಗತಿಗಳ ವಿಸ್ಮಯಗಳ ಆಗರ. ಆಗ ನಾನಿನ್ನೂ ಎಳೆಯ ಮಗು. ತುಂಟಾಟಗಳೇ ನಮ್ಮ ಜೀವಾಳ.

ಊರ ಸಂದಿಗೊಂದಿಗಳ ತಿರುಗಾಡಿ ಚಿನ್ನಿದಾಂಡು, ಗೋಲಿ, ಚೆಂಡಾಟ ಆಡುವುದರಲ್ಲೇ ನಮ್ಮ ಅರ್ಧ ಬಾಲ್ಯ ಕಳೆದು ಹೋಗಿರುವ ಕಾಲ. ಹಳ್ಳ ತುಂಬಿ ರಸ್ತೆ ಮೇಲೆ ಹರಿಯುತ್ತಿದ್ದರೆ, ಬಾವಿಗೆ ಹೊಸ ನೀರು ಬಂದರೆ, ಕೆರೆ ಕೋಡಿ ಒಡೆದರೆ, ತುಂಬು ಮಳೆ ಬಂದು ಮನೆ ಮಾಳಿಗೆ ಜಂತಿ ಸೋರುತ್ತಿದ್ದರೆ, ಹಳೆ ಬಸ್ಸು ಕೆಟ್ಟು ಪಟ್ಟಣಕ್ಕೆ ಊರವರ ಕಾಲು ಮೂಡಿದ್ದರೆ ಅದನ್ನು ನೋಡುವುದು ನಮಗೆ ಸೊಗಸು. ಹಿರಿಯರಿಗೆ ಯಾವುದು ಕಷ್ಟ, ತೊಂದರೆಯೋ, ನಮಗದು ಸಂಭ್ರಮ ಮತ್ತು ಸಂತೋಷ. ಮಳೆ ಸುರಿಯುತ್ತಿದ್ದರೆ ಸೀತ ಅಲ್ಲ ಅವರಪ್ಪ ಬಂದರೂ ಜಗ್ಗದ ವಯಸ್ಸು ನಮ್ಮದು. ಹಳೇ ಹೀರೋ ಸೈಕಲ್ಲು ತಗೊಂಡು ಊರ ರಜ್ಜಿನ ತುಂಬೆಲ್ಲ ಓಡಾಡಿಸಿ, ಗಾಲಿ ರಿಮ್ಮಿಗೆ ಕರಲು ಮೆತ್ತಿಕೊಂಡು ಗಾಲಿ ಉರುಳದಿದ್ದರೂ, ಸೈಕಲ್ ಮುಂದೋಡದಿದ್ದರೂ ನಾವು ಅದೇ ಮಣ್ಣನ್ನು ಕೈಲಿ ಗೊರ್ಜಿ ಹಿಡಿದು ಚೂಪುಗಲ್ಲಿನಿಂದ ತೆಗೆದು ಅದರಲ್ಲಿ ಬಂಡಿ, ಎತ್ತು, ಗಣಪನನ್ನು ಮಾಡುತ್ತಿದ್ದೆವು. ನಮ್ಮ ಬಾಲ್ಯದ ದೇವರೆಂದರೆ ಈ ಕೈಲಿಂದ ಮಾಡಿದ ಮಣ್ಣಿನ ಗಣಪನೇ.

ಈಗ ಹಬ್ಬಗಳ ಕಾಲ. ಬಾಲ್ಯದಲ್ಲೂ ಪಂಚಮಿ ಉಂಡಿ

